<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹೊಸದುರ್ಗ</u>

**<u>ಸಿ.ಸಿ.ನಂ.33/2023</u>**

**ಫಿರ್ಯಾದುದಾರರು:-** **ವಿರುದ್ಧ** **ಆರೋಪಿತರು :-**

ಹೊಸದುರ್ಗ ಪೋಲೀಸರು

1. ಮಹೇಶ ತಂದೆ ರೇವಣ್ಣ,
   ವಯಸ್ಸು ಸುಮಾರು 35 ವರ್ಷ,
   ವ್ಯವಸಾಯ,

2. ಕೆಂಚಪ್ಪ ತಂದೆ ರೇವಣ್ಣ,
   ವಯಸ್ಸು ಸುಮಾರು 45 ವರ್ಷ,
   ವ್ಯವಸಾಯ,

3. ಓಂಕಾರಪ್ಪ ತಂದೆ ರೇವಣ್ಣ,
   ವಯಸ್ಸು ಸುಮಾರು 34 ವರ್ಷ,
   ವ್ಯವಸಾಯ,

4. ರೇವಣ್ಣ ತಂದೆ ಮುದ್ದುಗಿರಿಯಪ್ಪ,
   ವಯಸ್ಸು ಸುಮಾರು 70 ವರ್ಷ,
   ವ್ಯವಸಾಯ,

5. ರಂಗಮ್ಮ ಗಂಡ ರೇವಣ್ಣ,
   ವಯಸ್ಸು ಸುಮಾರು 65 ವರ್ಷ,
   ಮನೆಗೆಲಸ,

6. ಭಾರತಮ್ಮ ತಂದೆ ಮಹೇಶ ,
   ವಯಸ್ಸು ಸುಮಾರು 30 ವರ್ಷ,
   ಮನೆಗೆಲಸ,

ಎಲ್ಲರ ವಾಸಃ ಬೋಚೇನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ.**

**ಪ್ರಶ್ನೆ 1)** ಪ್ರಕರಣದಲ್ಲಿ ನಡೆದ ಸಾಕ್ಷಿಗಳ ವಿಚಾರಣೆಯನ್ನು ಕೇಳೀದ್ದೀಯಾ?
**ಉತ್ತರ :**

ಪ್ರಶ್ನೆ **2):** ಪ್ರಾ.ಸಾ.3 ಮಲ್ಲಿಕಾರ್ಜುನ ಇವನು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ 27-06-2021 ರಂದು ಮಧ್ಯಾಹ್ನ 4-15 ರ ಸಮಯದಲ್ಲಿ ತಮ್ಮ ಊರಿನ ಅರಳೀಕಟ್ಟೆಯ ಹತ್ತಿರ ತಾನು ಇತ್ತಲಿನಿಂದ ವಾಪಸ್ ಬರುತ್ತಿದ್ದಾಗ 1 ನೇ ಆರೋಪಿ ತನಗೆ ಬೈದು ಏಕಾಏಕಿ ದೊಣ್ಣೆಯಿಂದ ಎಡಭುಜಕ್ಕೆ ಹೊಡೆದಿದ್ದು, ಅಷ್ಟೊತ್ತಿಗೆ 2 ನೇ ಆರೋಪಿ ಅಲ್ಲಿಗೆ ಬಂದು ಕಲ್ಲಿನಿಂದ ತನ್ನ ಎಡಗಣ್ಣಿಗೆ ಹೊಡೆದಿರುತ್ತಾನೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **3):** ಪ್ರಾ.ಸಾ.3 ಮಲ್ಲಿಕಾರ್ಜುನ ತನ್ನ ನುಡಿ ಸಾಕ್ಷ್ಯದಲ್ಲಿ, 3 ರಿಂದ 7 ನೇ ಆರೋಪಿಗಳು ಅಲಲಿಗೆ ಬಂದು ತನ್ನನ್ನು ಹಿಡಿದು ಎಳೆದಾಡಿ ಕಾಲಿನಿಂದ ತನ್ನನ್ನು ತುಳಿದು ಬೋಳಿಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಚಾಸಾ-4 ಮತ್ತು 5 ರವರು ಗಲಾಗೆಯನ್ನು ನೋಡಿ ಬಿಡಿಸಿದ್ದು, ತನ್ನನ್ನು ಆಟೋದಲ್ಲಿ ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **4):** ಪ್ರಾ.ಸಾ.3 ಮಲ್ಲಿಕಾರ್ಜುನ ತನ್ನ ನುಡಿ ಸಾಕ್ಷ್ಯದಲ್ಲಿ, ಸದರಿ ಆಸ್ಪತ್ರೆಯ ವೈದ್ಯರು ತನ್ನನ್ನು ನೋಡಿ ಹೆಚ್ಚಿನ ಚಿಕಿತ್ಸೆಗೆ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದು, ದಿನಾಂಕಃ 01-07-2021 ರಂದು ರಾತ್ರಿ 8.30 ರ ಸಮಯದಲಲಿ ಹೊಸದುರ್ಗ ಪೋಲೀಸ್ ಠಾಣೆಗೆ ಹೋಗಿ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **5):** ಪ್ರಾ.ಸಾ.4 ರಾಮಕೃಷ್ಣ ಬಿ ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ 27-06-2021 ಮಧ್ಯಾಹ್ನ 4.15 ರ ಸಮಯದಲ್ಲಿ, ತಮ್ಮ ಊರಿನ ಅರಳೀಕಟ್ಟೆಯ ಹತ್ತಿರ ಆರೋಪಿಗಳು ಮತ್ತು ಚಾಸಾ-1 ರವರು ಮಧ್ಯೆ ಗಲಾಟೆ ಆಗಿದ್ದು, 1 ನೇ ಆರೋಪಿ ಕೋಲಿನಿಂದ ಚಾಸಾ-1 ರವರ ಎಡಗೈಗೆ ಹಳೇ ದ್ವೇಷದಿಂದ ಹೊಡೆದಿದ್ದು, 2 ನೇ ಆರೋಪಿ ಕಲ್ಲಿನಿಂದ ಚಾಸಾ-1 ರವರ ಎಡಗಣ್ಣಿಗೆ ಹೊಡೆದಿದ್ದಲು, 3 ರಿಂದ 7 ನೇ ಆರೋಪಿಗಳು ಒಟ್ಟಿಗೆ ಸೇರಿ ಗಲಾಟೆ ಮಾಡಿ ಚಾಸಾ-1 ರವರಿಗೆ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **6):** ಪ್ರಾ.ಸಾ.4 ರಾಮಕೃಷ್ಣ ಬಿ ತನ್ನ ನುಡಿ ಸಾಕ್ಷ್ಯದಲ್ಲಿ,ಚಾಸಾ-1 ರವರಿಗೆ ರಕ್ತ ಸೋರುತ್ತಿದ್ದು, ತಾನು ಮತ್ತು ಚಾಸಾ-5 ಸೇರಿ ಚಾಸಾ-1 ರವರನ್ನು ಆಟೋದಲ್ಲಿ ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದು, ಗಲಾಟೆಯಲ್ಲಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆಯನ್ನು ಹಾಕಿದ್ದು, ತಾನು ಆ ಕುರಿತು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **7):** ಪ್ರಾ.ಸಾ.5 ಅರುಣ್ ಕುಮಾರ್ ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ 02-07-2021 ರಂದು ಬೋಚೇನಹಳ್ಳಿ ಗ್ರಾಮದ ಅರಳೀಕಟ್ಟೆಯ ಹತ್ತಿರ ಆರೋಪಿಗಳು ಮತ್ತು ಚಾಸಾ-1 ರವರ ಮಧ್ಯೆ ಗಲಾಟೆ ಆಗಿದ್ದರಿ ವಿಚಾರವಾಗಿ ಪೋಲೀಸರು ಪಂಚನಾಮೆಗೆ ಬಂದಿದ್ದರಿಂದ, ತಾನು ಗುನ್ಹೆಸ್ಥಳ ಮತ್ತು ಕಚ್ಚಾನಕಾಶೆಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾನೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **8):** ಪ್ರಾ.ಸಾ.1 ಡಾ: ವಿಶ್ವನಾಥ ವಿ.ಆರ್ ತಮ್ಮ ನುಡಿ ಸಾಕ್ಷ್ಯದಲ್ಲಿ, ತಾನು ಹೊಸದುರ್ಗ ತಾಲ್ಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಕನಾಗಿ ಕರ್ತರ್ವ್ಯವನ್ನು ನಿರ್ವಹಿಸಿದ್ದು, ದಿ: 27.06.2021 ರಂದು ಸಾಯಂಕಾಲ 5-00 ರ ಸಮಯದಲ್ಲಿ ಚಾಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು, ತಾನು ಚಾಸಾ 01 ರವರ ಪರೀಕ್ಷಿಸಲಾಗಿ, ಚಾಸಾ-1 ರವರಿಗೆ ಬಲ ಕಣ್ಣಿನ ಕೆಳಭಾಗದಲ್ಲಿ ಕತ್ತರಿಸಿದ ಗಾಯ 1.5X1 cm ಮತ್ತು ಎಡಭುಜದಲ್ಲಿ ನೋವು ಇದ್ದು, ಆ ಕುರಿತು ತಾನು ಚಿಕಿತ್ಸೆಯನ್ನು ನೀಡಿ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **9):** ಪ್ರಾ.ಸಾ.2 ಜಯರಾಜು ತಮ್ಮ ನುಡಿ ಸಾಕ್ಷ್ಯದಲ್ಲಿ, ತಾನು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದು, ದಿ: 01-07-2021 ರಂದು ರಾತ್ರಿ 8.30 ರ ಸಮಯದಲ್ಲಿ ತಾನು ಠಾಣಾಧಿಕಾರಿಯಾಗಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ಸಂ 333/2021 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **10):** ಪ್ರಾ.ಸಾ.2 ಜಯರಾಜು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ: 02-07-2021 ರಂದು ಗುನ್ಯ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಮೇರೆಗೆ ಮಧ್ಯಾಹ್ನ 3.00 ರಿಂದ 4.00 ರವರೆಗೆ ಪಂಚನಾಮೆಯನ್ನು ಮಾಡಿ , ಒಂದು ಕೋಲು ಮತ್ತು ಒಂದು ಹಿಡಿ ಗಾತ್ರದ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿದ್ದು, ಅದೇ ಸಮಯದಲಲಿ ಕಚ್ಚಾ ನಕಾಶೆ ತಯಾರು ಮಾಡಿ, ಅದೇ ದಿನ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುರತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ **:**

ಪ್ರಶ್ನೆ **11):** ಪ್ರಾ.ಸಾ.2 ಜಯರಾಜು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ 25-07-2021 ರಂದು ಚಾಸಾ-6 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ, ತನಿಖೆಯನ್ನು ಪೂರ್ಣಗೊಳಿಸಿ, ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ**?**

ಉತ್ತರ **:**

**ಪ್ರಶ್ನೆ 12):** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವುದು ಇದೆಯೇ?

**ಉತ್ತರ :**

**ಪ್ರಶ್ನೆ 13)** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ?

**ಉತ್ತರ :**

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿರುವ ಉತ್ತರವನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ ಮತ್ತು ಅದು ಸರಿ ಇರುತ್ತದೆ ಅಂತ ಈ ಮೂಲಕ ದೃಢೀಕರಿಸುತ್ತೇನೆ)

ಸಹಿ/-

**ಹೊಸದುರ್ಗ.**
ದಿ**:18.03.2026**

**ಹಿರಿಯ** ದಿವಾಣಿ **ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು**
ಹೊಸದುರ್ಗ**.**